| | | | |
|---|---|---|---|
| 13. | 2401 | ಸಸ್ಯ ಸಂಗೋಪನೆ-ತೋಟಗಾರಿಕೆ | 18.60 |
| 14. | 2402 | ಭೂಸಾರ ಮತ್ತು ಜನರಕ್ಷಣೆ | 1.20 |
| 15. | 2403 | ಪಶುಸಂಗೋಪನೆ | 69.60 |
| 16. | 2405 | ಮೀನುಗಾರಿಕೆ | 6.60 |
| 17. | 2515 | ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು | 30.69 |
| 18. | 2702 | ಸಣ್ಣ ನೀರಾವರಿ | 21.60 |
| 19. | 2702 | ಅಂತರ್ಜಲಾನ್ವೇಷಣೆ | 5.50 |
| 20. | 2851 | ಖಾದಿ ಮತ್ತು ಗ್ರಾಮೋದ್ಯೋಗ | 11.40 |
| 21. | 2851 | ರೇಷ್ಮೆ ವ್ಯವಸಾಯೋದ್ಯಮ | 12.60 |
| 22. | 3054 | ರಸ್ತೆ ಮತ್ತು ಸೇತುವೆಗಳು | 56.40 |
| 23. | ಸಚಿವಾಯಲ ಆರ್ಥಿಕ ಸೇವೆಗಳು | | 4.80 |
| | | | ಒಟ್ಟು: 2183.47 |

**ಪರಿಸರ ಮಾಲಿನ್ಯ ನಿಯಂತ್ರಣ ಮಂಡಲಿಯಿಂದ ಕಾಫಿ ಬೆಳೆಗಾರರಿಗೆ ಉಂಟಾಗಿರುವ ತೊಂದರೆ.**

**299(451) ಶ್ರೀ ಎಂ.ಪಿ.ಅಪ್ಪಚ್ಚು ರಂಜನ್ (ಸೋಮವಾರ ಪೇಟೆ):**

ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಮ ಮಂಡಳಿಯಿಂದ ಕಾಫಿ ಬೆಳೆಗಾರರಿಗೆ ಪರವಾನಗೆ ವಿತರಿಸುವ ಕಾರಣಕ್ಕಾಗಿ ಆಗುತ್ತಿರುವ ಕಿರುಕುಳವು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಸದರಿ ಕಿರುಕುಳವನ್ನು ತಪ್ಪಿಸಲು ಪರವಾನಗೆ ತೆಗೆದುಕೊಳ್ಳುವುದನ್ನು ಕಡ್ಡಾಯ ಮಾಡದೇ ಇರಲು ಸರ್ಕಾರ ಏನಾದರೂ ಯೋಚಿಸಿದೆಯೇ?

ಶ್ರೀ ಬಸವರಾಜ ನೀ.ಶಿವಣ್ಣನವರ್

(ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು.)

ಅ) ಪರಿಸರ ಮಾಲಿನ್ಯ ನಿಯಂತ್ರಣ ಕ್ರಮ ಕೈಗೊಂಡಿದ್ದರಿಂದ ಅನಾನೂಕೂಲವಾಗಿದೆ ಎಂದು ದೂರು ಬಂದಿವೆ.

ಅ) 1947ರ ಜಲ ಕಾಯ್ದೆ ಕೇಂದ್ರ ಕಾಯ್ದೆಯಾಗಿದ್ದು ಅದರನ್ವಯ ಅದನ್ನು ರಾಜ್ಯ ಅಳವಡಿಸಿದ್ದು, ಪರವಾನಿಗೆ ಪಡೆಯುವುದು ಶಾಸನಬದ್ಧ ಕರ್ತವ್ಯವಾಗಿರುವುದರಿಂದ ಇದನ್ನು ಮನ್ನಾ ಮಾಡಲು ಸಾಧ್ಯವಿಲ್ಲ.

**ಕೊಡಗಿನಲ್ಲಿ ಅರಣ್ಯ ಇಲಾಖೆ ಮರಗಳ ಕಳ್ಳ ಸಾಗಾಣಿಕೆ ವಾಹನಗಳ ಮುಟ್ಟುಗೋಲು.**

**300 (695) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರ ಪೇಟೆ):**

ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಕೊಡಗಿನಲ್ಲಿ ಅರಣ್ಯ ಇಲಾಖೆಯಲ್ಲಿ ಶ್ರೀಗಂಧ ಹಾಗು ಬೀಟೆ ಮರಗಳ ಕಳ್ಳ ಸಾಗಾಣಿಕೆ ಮಾಡುವಾಗ ಸಿಕ್ಕಿಬಿದ್ದ ವಾಹನ ಕಾರು, ಜೀಪು ಇತ್ಯಾದಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಂಡಿದೆಯೇ;

ಆ) ಈ ರೀತಿ ಮುಟ್ಟುಗೋಲು ಹಾಕಿ ಕೊಂಡ ವಾಹನಗಳ ಸಂಖ್ಯೆ ಎಷ್ಟು;

ಇ) ಹರಾಜು ಮಾಡಿ ಸರ್ಕಾರಕ್ಕೆ ಬಂದ ಹಣ ಎಷ್ಟು? (ವಿವರ ಕೊಡುವುದು)?

**ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ ಅರಣ್ಯ ಸಚಿವರು.**

ಅ) ಹೌದು

ಆ) ಒಂದು

ಇ) ಒಂದು ಲಾರಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದು ಅದನ್ನು ಹರಾಜು ಮಾಡಲಾಗಿ ಸರ್ಕಾರಕ್ಕೆ ಒಂದು ಲಕ್ಷ ರೂಪಾಯಿ ಆದಾಯ ಬಂದಿರುತ್ತದೆ.

**ಕೊಡಗಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು.**

**301 (693) ಶ್ರೀ ಅಪ್ಪಚ್ಚು ರಂಜನ್,ಎಂ.ಪಿ.(ಸೋಮವಾರ ಪೇಟೆ):**

ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷದಿಂದಲೂ ಕೊಡಗಿನಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡದಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

**ಡಾ।।ಹೆಚ್.ಸಿ.ಮಹದೇವಪ್ಪ ಮಾನ್ಯ ಆರೋಗ್ಯ ಮತ್ತು ಕುಕ.ಸಚಿವರು**

ಅ) ನಿಜವಲ್ಲ.

ಆ) 1996ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬಲು 9 ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಯಿತು. ಆದರೆ, ಕೇವಲ ಇಬ್ಬರು ವೈದ್ಯರು ಮಾತ್ರ ಕರ್ತವ್ಯಕ್ಕೆ ಹಾಜರಿಯಾದರು.

ಇ) ಕರ್ನಾಟಕ ಲೋಕಸೇವಾ ಆಯೋಗದಿಂದ ಈಗಾಗಲೇ 400 ವೈದ್ಯರುಗಳನ್ನು ಆಯ್ಕೆ